Sri R. S. HEGDE.—Is it not a fact that certain Block Extension Officers are to be trained from the senior Panchayat Secretaries, and if so, what is the position ?

Sri R. M. PATIL.—It forms part of another question.

ಶ್ರೀ ಎಸ್. ನುಬ್ಬಯ್ಯ ನಾಯಕ್.—ಕೃಷಿಯ ವಿಚಾರದಲ್ಲಿ ಏನಾದರೂ ತರಬೇತು ಕೊಡುವ ಅವಕಾಶ ಇದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅವಶ್ಯವಾಗಿ ಅದರಲ್ಲೂ ಕೃಷಿ ವಿಜ್ಞಾನದೊಳಗೆ ತರಬೇತು ಕೊಡಬೇಕಾದ ವಿಚಾರ ಇದೆ. ಈ ಬಗ್ಗೆ ಸ್ಕೀಂ ತಯಾರಾಗುತ್ತಾ ಇದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನುಪ್ರೀಮ್ ಕೋರ್ಟ್ ಜಡ್‌ಮೆಂಟ್ ನೋಡಿಕೊಂಡು ರೆವೆನ್ಯೂ ಡಿಪಾರ್ಟ್‌ಮೆಂಟ್ ಕನ್‌ಸರ್ನ್ ಮಾಡುತ್ತೇವೆಂದು ಹೇಳುತ್ತೀರಿ. ಇದನ್ನು ಮಾರ್ಚ್ ಕೊನೆಯೊಳಗೆ ಫೈನಲೈಸ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಆರ್. ಎಂ. ಪಾಟೀಲ್.—ಬೆಂಪರರಿ ಬೇಸಿಸ್ ಒಂದು ವಾರದೊಳಗೆ ಮಾಡಬಹುದು. ಪರ್ಮನೆಂಟ್ ಮಾಡುವುದಕ್ಕೆ ನಮಯ ಜಾಸ್ತಿ ತೆಗೆದುಕೊಳ್ಳುತ್ತದೆ.

Sri SANJEEVANATH AIKALA.—Is it a fact that last year these Panchayat Secretaries were not given T.A. because the countersigning authority is the Tahsildar and because they are under the supervisory control of the Block Development Officers ?

Sri R. M. PATIL.—It will also be examined.

Sri R. S. HEGDE.—Has it come to the notice of the Government that on account of insecurity of service of the Panchayat Secretaries, the entire Panchayat agricultural production plan has suffered, both in execution and implementation ?

Sri R. M. PATIL.—So far as Bombay area is concerned, there is no insecurity because they have been appointed by the Panchayats before the Reorganisation. Therefore, there is no insecurity of service for them.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಪೀಮ್, ತಾವು ಪೊನ್ನೆ ಮೈಸೂರಿನಲ್ಲಿ ಡಿವಿಜಿನಲ್ ಸೆಮಿನಾರಿನಲ್ಲಿ ಭಾಷಣ ಮಾಡುತ್ತಾ ಬಿಜಿನೆಸ್ ಇಯರ್ ಮುಗಿಯುವುದರೊಳಗೆ ಎಲ್ಲಾ ಸೆಕ್ರಟರಿಗಳನ್ನೂ ಪರ್ಮನೆಂಟ್ ಮಾಡುತ್ತೇವೆಂದು ಹೇಳಿದ್ದೀರಿ. ಪಟೇಲ ಶ್ಯಾನುಭೋಗರನ್ನು ತೆಗೆಯುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಕಾರ್ಯರೂಪಕ್ಕೆ ತರಲು ಎಷ್ಟು ನಮಯಬೇಕು ?

Sri R. M. PATIL.—We are trying to do our best.

ಶ್ರೀ ಸಂಜೀವನಾಥ ಐಕಳ.—ಈಗ ಗ್ರಾಮ ಉದ್ಯೋಗನ್ಥರ ಹುದ್ದೆಯನ್ನು ತೆಗೆದ ನಂತರ ಅವರ ಸ್ಥಾನವನ್ನು ಭರ್ತಿಮಾಡಿಕೊಳ್ಳಲು ಸಾಕಾದಷ್ಟು ಪಂಚಾಯ್ತಿ ಸೆಕ್ರಟರಿಗಳಿದ್ದಾರೆಯೇ ? ಮತ್ತು ಪಂಚಾಯಿತಿ ಸೆಕ್ರಟರಿಗಳು ಇಲ್ಲದಿದ್ದರೆ, ಗ್ರಾಮ ಉದ್ಯೋಗನ್ಥರ ಸ್ಥಾನವನ್ನು ಭರ್ತಿ ಮಾಡಲು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಆರ್. ಎಂ. ಪಾಟೀಲ್.—ಪ್ರತಿಯೊಂದು ಪಂಚಾಯ್ತಿಗೂ ಸೆಕ್ರೆಟರಿ ಇರಬೇಕೆಂದು ನಿಯಮವಿದೆ. ಪಗಾರ ಕೊಡುವುದಕ್ಕೆ ಶಕ್ತಿ ಇಲ್ಲದೆ ಇದ್ದರೆ, ಅಂಥ ಕಡೆ ಎರಡು-ಮೂರು ಪಂಚಾಯ್ತಿಗಳಿಗೆ ಒಂದು ಸೆಕ್ರಟರಿ ಇರಬಹುದು.

Appointment of Panchayat Secretaries.

*Q.—215. Smt. B. L. SUBBAMMA (Chickmagalur).—

Will the Government be pleased to state :—

(a) when the Panchayat Secretaries were appointed in place of Village Offic n the State ;

(*b*) the monthly salary they are getting;

(*c*) whether they are aware that they are not getting their salary in time?

A.—Sri R. M. PATIL (Minister for Development, Panchayat Raj and Municipal Administration).—

(*a*) Panchayat Secretaries were not appointed in place of Village Officers in the State at any time.

(*b*) Does not arise in view of reply to (*a*) above.

(*c*) Does not arise in view of reply to (*a*) above.

ಶ್ರೀಮತಿ ಬಿ. ಎರ್. ನುಬ್ಬಮ್ಮ.—ರಾಜ್ಯದಲ್ಲಿ ಪಂಚಾಯ್ತು ಕಾರ್ಯದರ್ಶಿಗಳನ್ನು ಗ್ರಾಮಾಧಿಕಾರಿಗಳ ಬದಲಾಗಿ ನೇಮಕ ಮಾಡಿಲ್ಲವೆಂದು ಹೇಳಿದ್ದೀರಿ. ಆದರೆ ಪಂಚಾಯಿತಿ ಕಾರ್ಯದರ್ಶಿಗಳ ಕೆಲಸಕ್ಕೂ ಗ್ರಾಮಾಧಿಕಾರಿಗಳ ಕೆಲಸಕ್ಕೂ ಇರುವ ವ್ಯತ್ಯಾಸವೇನು?

ಶ್ರೀ ಆರ್. ಎಂ. ಪಾಟೀಲ್.—ರೆವೆನ್ಯೂ ತರಾಟಿ ಪಂಚಾಯಿತಿ ಕೆಲಸ ನೋಡಿಕೊಳ್ಳುತ್ತಾರೆ. ಪಂಚಾಯಿತಿ ಸೆಕ್ರೆಟರಿಗಳು ರೆವೆನ್ಯೂ ಕೆಲಸ ನೋಡಿಕೊಳ್ಳುತ್ತಾರೆಂದು ಹೇಳಲಿಲ್ಲ. ಅವರವರ ಹುದ್ದೆಗಳ ಕೆಲ್ಸಗಳೇ ಬೇರೆ.

ಶ್ರೀಮತಿ ಬಿ. ಎರ್. ನುಬ್ಬಮ್ಮ.—ಗ್ರಾಮಾಧಿಕಾರಿಗಳ ಹುದ್ದೆ ರದ್ದು ಆದಮೇಲೆ ಕೆಲಸ ನೋಡಿಕೊಳ್ಳುವ ಜವಾಬ್ದಾರಿ ಕಾರ್ಯದರ್ಶಿಯದಲ್ಲವೇ?

ಶ್ರೀ ಆರ್. ಎಂ ಪಾಟೀಲ್.—ಅದು ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟದ್ದು. ಅವರು ಒಪ್ಪಿದರೆ ಬರುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈಗ ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಕ ಮಾಡಿದರೆ ಆಗ ಉತ್ಪನ್ನದ ಬಹುತೇಕ ಭಾಗ ಅವರ ಸಂಬಳಕ್ಕೆ ಹೋಗುತ್ತದೆ. ಅವರನ್ನು ರೆವೆನ್ಯೂ ಕಮ್ ಪಂಚಾಯಿತಿ ಸೆಕ್ರೆಟರಿ ಮಾಡುವುದರಿಂದ ಪಂಚಾಯಿತಿ ವಸೂಲು ಆಗುವ ಕೆಲಸಗಳನ್ನೂ ನೋಡುವುದರಿಂದ ಶೀಘ್ರವಾಗಿ ಅವರನ್ನು ನೇಮಕ ಮಾಡುವುದಕ್ಕೆ ಸರ್ಕಾರಕ್ಕೆ ಕಷ್ಟವೇನು?

ಶ್ರೀ ಆರ್. ಎಂ. ಪಾಟೀಲ್.—ತಾವು ಇವರದು ಅವರದು ಕೆಲಸ ಮಾಡಿದರೆ ಸರಿಹೋಗುತ್ತದೆ ಎಂದು ಹೇಳುತ್ತಾ ಇರುವುದು ಅಜಿಮ್‌ಷ್ಟ್ ಮೇಲೆ. ಆದರೆ ರೆವೆನ್ಯೂ ತರಾಟಿಯಿಂದ ತೊಂದರೆಯಾಗಿದೆ, ಬೇಕಾದಷ್ಟು ಆಗಬೇಕಾದ ಕೆಲಸ ಆಗಲಲ್ಲ ಎಂದು ವಾದ ಇದೆ. ಆದ್ದರಿಂದ ಪ್ರತಿಯೊಂದು ಪಂಚಾಯಿತಿಗೂ, ಸಣ್ಣ ಪಂಚಾಯಿತಿ ಆದರೆ 2—3 ಪಂಚಾಯಿತಿಗಳು ಸೇರಿಕೊಂಡು ಒಬ್ಬ ಸೆಕ್ರೆಟರಿಯನ್ನು ನೇಮಕ ಮಾಡುವ ಆವಶ್ಯಕತೆ ಇದೆ. ಇದರಿಂದ ವ್ಯವಸಾಯ ಉತ್ಪಾದನೆ ಕಾರ್ಯ ಮಾಡುವುದಕ್ಕೆ ಅನುಕೂಲವಾಗುತ್ತದೆ. ಮತ್ತು ತರಾಟಿ ಮತ್ತು ಪಂಚಾಯಿತಿ ಸೆಕ್ರೆಟರಿಗಳನ್ನು ಸೇರಿಸುವುದು ಸೂಕ್ತವಲ್ಲವೆಂದು ಎನ್ನುವ ವಾದ ಕೂಡಾ ಇದೆ.

Sri C. S. HULKOTI.—Is there any proposal for the Government to entrust the work of Village Accountants to the Panchayet Secretary?

ಶ್ರೀ ಆರ್. ಎಂ. ಪಾಟೀಲ್.—ಈಗ ಇರುವಂತಹದು ಇದೆ. ಹಳೇ ಮೈಸೂರಿನಲ್ಲಿ ಅದೇ ಪದ್ಧತಿ ಮೇರೆಗೆ ನಡೆಯುವುದು.

ಶ್ರೀ ಸಿ. ಎಸ್. ಹುಲ್ಕೋಟಿ.—ತರಾಟಿ ಕೆಲಸ ಬೇರೆ ಆಗುತ್ತದೆ, ಪಂಚಾಯಿತಿ ಕೆಲಸ] ಬೇರೆ ಆಗುತ್ತದೆ ಎನ್ನುವ ಪ್ರಪೋಸಲ್ ಸರ್ಕಾರದ ಮುಂದೆ ಇದೆಯೇ?

ಶ್ರೀ ಆರ್. ಎಂ. ಪಾಟೀಲ್.—ಈಗಾಗಲೇ ಹೇಳಿದೆ, ಎರಡು ವಿಚಾರಗಳನ್ನೂ ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ, ಯಾವುದು ಯೋಗ್ಯ ಎನ್ನುವುದನ್ನು ಆಲೋಚನೆ ಮಾಡುತ್ತಿದ್ದೇವೆಂದು ಹೇಳಬಹುದು.

ಶ್ರೀ ಬಿ. ಚನ್ನಬೈರೇಗೌಡ.—ಪಂಚಾಯಿತಿಗೆ ಬೇರೆ ರೆವಿನ್ಯೂ ಅಧಿಕಾರಿಗಳು ಇರುವಾಗ ಸೆಕ್ರೆಟರಿ ಬೇರೆ ಮಾಡಿದರೆ ದೇಶದ ಹಣ ಜಾಸ್ತಿ ಖರ್ಚು ಆಗುವುದಿಲ್ಲವೇ?

ಶ್ರೀ ಆರ್. ಎಂ. ಪಾಟೀಲ್.—ದೇಶದ ಹಣ ಖರ್ಚಾಗುವ ವಿಚಾರವನ್ನು ಮಾಡಬೇಕಾಗುತ್ತದೆ. ಯಾವುದು ಯೋಗ್ಯವೋ ಮತ್ತು ಯಾವುದು ಆರ್ಥಿಕ ದೃಷ್ಟಿಯಿಂದ ಹೆಚ್ಚಿನ ರಾಭವಾಗುತ್ತದೋ ಅದನ್ನು ಮಾಡಬೇಕಾಗುತ್ತದೆ.

ಶ್ರೀ ಎ. ಎಸ್. ಲಕ್ಷ್ಮೀಕಾಂತಪ್ಪ.—ಪಂಚಾಯಿತಿ ಸೆಕ್ರೆಟರಿಗಳು ಮತ್ತು ಎರೇಜ್ ಅಕೌಂಟೆಂಟ್ಸ್ ಬೇರೆ ಬೇರೆ ಮಾಡುತ್ತೀವೆ ಎಂದು ಹೇಳಿದ್ದಾರೆ. ಅವರನ್ನು ನೇಮಕ ಮಾಡುವಾಗ ಪಂಚಾಯಿತಿ ಸೆಕ್ರೆಟರಿ ಕಂ ಎರೇಜ್ ಅಕೌಂಟೆಂಟ್ ಎಂದು ತಾವು ಅವರಿಗೆ ಕೆಲಸ ಕೊಟ್ಟಾಗ ಹೇಳಿರುವಾಗ ಅವರಿಂದ ಏತಕ್ಕೆ ಎರೇಜ್ ಅಕೌಂಟೆಂಟ್ಸ್ ಕೆಲಸ ತೆಗೆದುಕೊಳ್ಳಬಾರದು ?

ಶ್ರೀ ಆರ್. ಎಂ. ಪಾಟೀರ್.—ಈಗ ಪಂಚಾಯಿತಿ ಸೆಕ್ರೆಟರಿ ಮತ್ತು ತರಾಟಿ ಎರಡು ಕೆಲಸ ನಿಗಾಯಿಸಿಕೊಂಡು ಹೋಗಿದ್ದು ಸಾರ್ಥಕ ಆಗಿದೆಯೇ, ಇಲ್ಲವೇ ಎನ್ನುವ ವಿಷಯ ಚರ್ಚೆಗೆ ಇದೆ. ಇದನ್ನೇ ಮುಂದುವರಿಸಿಕೊಂಡು ಹೋಗುವ ವಿಚಾರ ಪ್ರಬಲ ಇದ್ದರೆ, ಅದೇ ಆಗಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಂಚಾಯಿತಿ ಸೆಕ್ರೆಟರಿಗಳನ್ನು ನೇಮಕ ಮಾಡಿದ ಮೇಲೆ ಮನೆ ಕಂದಾಯ ಮತ್ತು ಸೈಟ್ ಕಂದಾಯಗಳು ಎಷ್ಟರಮಟ್ಟಿಗೆ ವಸೂಲು ಆಗಿದೆ ಮತ್ತು ದೇಶದಲ್ಲಿ ಎಷ್ಟರಮಟ್ಟಿಗೆ ಅವರಿಂದ ಕೆಲಸ ನಡೆದಿದೆ ಎಂದು ತಮ್ಮ ಭಾವನೆ ?

Mr. SPEAKER.—How does it arise under this question ? If the information is available, it can be given.

ಶ್ರೀ ಆರ್. ಎಂ. ಪಾಟೀರ್.—ಆ ವಿಷಯ ಹೇಳಬೇಕು ಎಂದರೆ ಸರ್ವೇಸಾಧಾರಣವಾಗಿ ಹೇಳ ಬಹುದು. ಸರಿಯಾಗಿ ಕೆಲಸ ಆಗಿಲ್ಲ. ಪಂಚಾಯಿತಿ ಸೆಕ್ರೆಟರಿಗಳಾಗಲ, ತರಾಟಿಗಳಾಗಲ ಪಂಚಾಯಿತಿ ಹೌಸ್ ಟ್ಯಾಕ್ಸ್ ಏನು ಇದೆ, ಅದನ್ನು ವಸೂಲು ಮಾಡಿಲ್ಲ. ಮಾಡಿರುವ ಕಡೆ ಬಹಳ ಕಡಿಮೆ ಇದೆ. 10—20 ಪರ್ಸೆಂಟ್ ಆದರೆ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ಎಂದು ಹೇಳ ಬಹುದು. ಇಂತಹ ಪರಿಸ್ಥಿತಿಯೊಳಗೆ ಎರಡು ಕೆಲಸ ಕೂಡಿಸಿಕೊಂಡು ಹೋಗುವುದು ಸಮಂಜಸವೇ, ಸರಿಯಾದುದು ಅಲ್ಲವೇ, ಎನ್ನುವ ವಿಷಯ ಚರ್ಚೆಗೆ ಇದೆ.

Sri SANJIVANATH AIKALA.—All the Panchayat Secretaries are considered full time Government employees. In view of that, will leave facilities, provident fund and other benefits given to other Government employees be given to them also.

ಶ್ರೀ ಆರ್. ಎಂ. ಪಾಟೀರ್.—ಇದೇ ವಿಷಯ ಚರ್ಚೆ ಮಾಡಿ ನಿರ್ಧಾರ ಮಾಡುವುದು ಇದೆ. ಒಮ್ಮೆಲೇ ಹೇಳುವುದಕ್ಕೆ ಆಗುವುದಿಲ್ಲ. ಹಣದ ಖರ್ಚು ಎಷ್ಟು ಪ್ರಮಾಣದಲ್ಲಿ ಹೋಗುತ್ತದೆ ಎನ್ನುವುದು ವಿಚಾರ ಮಾಡಬೇಕಾಗುತ್ತದೆ.

ಶ್ರೀಮತಿ ಬಿ. ಎಸ್. ನುಚ್ಚಮ್ಮ.—ದೇಶದಲ್ಲಿ ಪಂಚಾಯಿತಿ ಉತ್ಪನ್ನ ಬಹಳ ಕಡಿಮೆ ಇರುವು ದರಿಂದ ಆ ಪಂಚಾಯಿತಿ ಕಾರ್ಯದರ್ಶಿಗಳ ವೇತನವನ್ನು ಪ್ರಾಂತ ಸರ್ಕಾರ ಅಥವಾ ಕೇಂದ್ರ ಸರ್ಕಾರ ವಹಿಸಿಕೊಂಡು ನಡೆಸುವ ಆಲೋಚನೆ ಸರ್ಕಾರದ ಆಲೋಚನೆಯಲ್ಲಿದೆಯೇ ?

ಶ್ರೀ ಆರ್. ಎಂ. ಪಾಟೀರ್.—ಈ ವಿಚಾರ ಸರ್ಕಾರದ ಆಲೋಚನೆಯಲ್ಲಿದೆ. ನಿರ್ಧಾರವಾಗಿ ಯಾವ ನಿಶ್ಚಿತ ವಿಚಾರ ಸರ್ಕಾರದ ಮುಂದೆ ಇಲ್ಲ.

Sri A. S. PATIL.—Is it not a fact that the work turned out in panchayats in which *Talatis* are employed as Secretaries, is not satisfactory ?

Mr. SPEAKER.—The question put was not with regard to revenue collections and all that.

Sri C. J. MUCKANNAPPA.—Is it the intention of the Government to appoint village accountants also in addition to the Panchayat Secretaries ?

ಶ್ರೀ ಆರ್. ಎಂ. ಪಾಟೀರ್.—ಪಂಚಾಯಿತಿ ಸೆಕ್ರೆಟರಿಯನ್ನು ಪಂಚಾಯಿತಿ ನಲುವಾಗಿ ಪಂಚಾಯಿತಿ ಕೆಲಸದ ನಲುವಾಗಿ ಪಂಚಾಯಿತಿ ಪ್ಲಾನ್ ಪ್ರೊಡಕ್ಷನ್ ನಲುವಾಗಿ ನೇಮಿಸಿಕೊಳ್ಳ ಬೇಕು. ರೆವಿನ್ಯೂ ತರಾಟಿಗಳು ಬೇರೆ ಆಗುತ್ತದೆ.

ಶ್ರೀ ಸಂಜೀವನಾಥ ಐಕಳ.—ಗ್ರಾಮಾಧಿಕಾರಿಗಳು ಹಿಂದೆ ನಡೆದ ಚುನಾವಣೆಯಲ್ಲಿ ಭಾಗ ವಹಿಸಿದ್ದು ಉಂಟೇ ?

Mr. SPEAKER.—How does it arise out of this question ?

Sri R. S. HEGDE.—In view of the paucity of work for village accounts in the maintenance of revenue records and collection of revenue, do the Government think of entrusting the revenue authorities with the maintenance of record of rights, etc. as they had done in Maharashtra ?

Sri R. M. PATIL.—That is also under consideration and the Revenue Department is actively considering this aspect.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನೇಕ ವಿಚಾರ ಮಾಡುವುದು ಇನೆ ಎಂದು ಹೇಳಿದಿರಿ ಜನರಲ್ ಎರೆಕ್ಷನ್ ಆದಮೇಲೆ ಮಾಡುತ್ತೀರೊ ಮುಂಚೆ ಮಾಡುತ್ತೀರೋ ನೋಡಬೇಕು.

ಶ್ರೀ ಆರ್. ಎಂ. ಪಾಟೀಲ್.—ಯಾವಾಗ ಬೇಕೋ ಆಗ ವಿಚಾರ ಮಾಡುತ್ತೇವೆ.

Laying of Railway Line.

*Q.—265. Sri R. KENCHAPPA (Pavagada).—

Will the Government be pleased to state :—

(*a*) whether the laying of a railway line from Tumkur to Chitradurga *via* Koratagere, Madhugiri, Madkasira, Pavagada and Challakere is under the consideration of the Government from a long time ;

(*b*) whether any survey of this line has been conducted ;

(*c*) if not, whether they will recommend to the Central Government to take up this survey work and to lay this railway line ?

A.—Sri VEERENDRA PATIL (Minister for Public Works).—

(*a*) No.

(*b*) The information is not available.

(*c*) Not for the present.

ಶ್ರೀ ಆರ್. ಕೆಂಚಪ್ಪ.—ರೈಲು ಮಾರ್ಗವನ್ನು ಯಾವ ಯೋಜನೆಯಲ್ಲಿ ಸೇರಿಸುವುದಕ್ಕೆ ಶಿಫಾರ್ಸು ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.— ಆಗರೇ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ರಾಜ್ಯದಲ್ಲಿ ಅತಿ ಮಹತ್ವವಾದ 8 ರೈಲ್ವೆ ಲೈನುಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿದ್ದೇವೆ. ಈ 8 ರೈಲ್ವೆ ಲೈನು ತೆಗೆದುಕೊಳ್ಳುವುದೇ ಅನುಭವ ಇರುವುದರಿಂದ ಇದನ್ನು ಈಗರೇ ಒತ್ತಾಯ ಮಾಡುವ ಹಾಗಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ತುಮಕೂರು ಪ್ರಾಮುಖ್ಯತೆ ಪಡೆದಿರುವುದರಿಂದ ಅಲ್ಲಿಯ ಪ್ರದೇಶಗಳ ವಾಣಿಜ್ಯೋದ್ಯಮಿಗಳ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಈ ರೈಲು ಮಾರ್ಗವನ್ನು 4ನೇ ಯೋಜನೆಯೊಳಗೆ ಸೇರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—4ನೇ ಯೋಜನೆಯಲ್ಲಿ 8 ಅತಿ ಮಹತ್ವವಾದ ರೈಲ್ವೆ ಲೈನುಗಳನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇವೆ. ಈಗರೇ ಹೇಳಿದ ಆ 8 ಲೈನು ತೆಗೆದುಕೊಳ್ಳುವುದೇ ಅನುಭವ ಎಂದು ಅನಿಸುತ್ತದೆ. 4ನೇ ಯೋಜನೆಯಲ್ಲಿ ಬೇರೆ ಸೇರಿಸುವುದಕ್ಕೆ ಒತ್ತಾಯ ಮಾಡುವಹಾಗಿಲ್ಲ.

ಶ್ರೀ ಬಿ. ಭಾಸ್ಕರಶೆಟ್ಟಿ.—ಕೇಂದ್ರಕ್ಕೆ ಒತ್ತಾಯ ಮಾಡಿದ 8 ರೈಲ್ವೆ ಲೈನುಗಳು ಯಾವುವು ?

Mr SPEAKER.—These are available in the printed answers already supplied.